# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೩೧, ಡಿಸೆಂಬರ್, ೨೦೨೫ (ಪುಷ್ಯ, ೧೦, ಶಕವರ್ಷ, ೧೯೪೭)<br>BENGALURU, WEDNESDAY, 31, DECEMBER, 2025 ( PUSHYA , 10, SHAKAVARSHA, 1947) | ನಂ. ೮೪೭<br>No. 847 |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 322 ಮೈಅಪ್ರಾ 2024(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, 4ನೇ ಮಹಡಿ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:31.12.2025

## ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 145 ಎಂಐಬಿ 98, ದಿನಾಂಕ-27-05-1998 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಎ) ರಡಿಯಲ್ಲಿ ವಿರಾಜಪೇಟೆ ಪಟ್ಟಣಕ್ಕೆ ಸ್ಥಳೀಯ ಯೋಜನಾ ಪ್ರದೇಶವನ್ನಾಗಿ ಘೋಷಿಸಿ, ಸದರಿ ಕಾಯ್ದೆಯ ಕಲಂ 2(7)(ಬಿ) ರಲ್ಲಿ ವಿರಾಜಪೇಟೆ ಪುರಸಭೆಯನ್ನು ವಿರಾಜಪೇಟೆ ಪುರಸಭಾ ಯೋಜನಾ ಪ್ರಾಧಿಕಾರ ಎಂದು ಆದೇಶಿಸಲಾಗಿತ್ತು. ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 322 ಮೈಅಪ್ರಾ 2024, ದಿನಾಂಕ:31.12.2025 ರಲ್ಲಿ, ಹೆಚ್ಚುವರಿಯಾಗಿ 10 ಗ್ರಾಮಗಳನ್ನು ಸೇರಿಸಿ, ಹಾಲಿ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲಾಗಿದೆ. ಅದರಂತೆ ದಿನಾಂಕ:31.12.2025ರಲ್ಲಿ ಹೊರಡಿಸಿರುವ ಸ್ಥಳೀಯ ಯೋಜನಾ ಪ್ರದೇಶ ಎಲ್ಲೆಯ **ಅನುಬಂಧ-ಎ** ಮತ್ತು **ಅನುಬಂಧ-ಬಿ** ನ್ನು ಯಥಾವತ್ತಾಗಿ ಪುಸ್ತಾಪಿಸಿ ಪ್ರತ್ಯೇಕ ಯೋಜನಾ ಪ್ರಾಧಿಕಾರಕ್ಕೆ ಪರಿಗಣಿಸಿದೆ.

ಸದರಿ ಪ್ರದೇಶದ ವ್ಯಾಪ್ತಿಯಲ್ಲಿನ ಅಭಿವೃದ್ಧಿಗಳನ್ನು ನಿಯಂತ್ರಿಸಲು ಮತ್ತು ಮಹಾಯೋಜನೆ ತಯಾರಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4(ಸಿ)(1) ರನ್ವಯ ಮತ್ತು 4(ಸಿ)(3)(i)(ii)(iii) ಹಾಗೂ (iv) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕು, ವಿರಾಜಪೇಟೆ ಪಟ್ಟಣಕ್ಕೆ ಪ್ರತ್ಯೇಕ ಯೋಜನಾ ಪ್ರಾಧಿಕಾರವನ್ನು ರಚಿಸಿ ಆದೇಶಿಸಲಾಗಿದೆ.

| ಕ್ರ. ಸಂ. | ಪದನಾಮ | ಹೆಸರು ಮತ್ತು ವಿಳಾಸ |
|---|---|---|
| 1 | ಅಧ್ಯಕ್ಷರು | ಸರ್ಕಾರದಿಂದ ನೇಮಿಸಲಾಗುವುದು |
| 2 | ಸದಸ್ಯ ಕಾರ್ಯದರ್ಶಿ | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಕೊಡಗು ಜಿಲ್ಲೆ, ಇವರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ. |
| 3 | ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು | 1. ವಿರಾಜಪೇಟೆ ಪುರಸಭೆಯ ಚುನಾಯಿತ ಸದಸ್ಯರೊಬ್ಬರು.<br>2. ವಿರಾಜಪೇಟೆ ಪುರಸಭೆಯ ಮುಖ್ಯಾಧಿಕಾರಿಗಳು, |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| | | |
|---|---|---|
| 4 | ಮೂರು ಜನ ಇತರೆ ಸದಸ್ಯರು | ಸರ್ಕಾರದಿಂದ ನೇಮಿಸಲ್ಪಡುವ ಅಧಿಕಾರೇತರ ಸದಸ್ಯರು |

ವಿರಾಜಪೇಟೆ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಿದ್ಧಪಡಿಸುವ ಮಹಾಯೋಜನೆ ಅನುಮೋದನೆಯಾಗಿ ಜಾರಿಗೆ ಬರುವವರೆಗೆ ಅಭಿವೃದ್ಧಿಗಳನ್ನು ನಿಯಂತ್ರಿಸಲು ಚಾಲ್ತಿಯಲ್ಲಿರುವ ವಲಯ ನಿಯಮಾವಳಿಗಳನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ ಹಾಗೂ ದಿನಾಂಕ:31.12.2025 ರಂದು ಘೋಷಣೆಯಾದ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಅಂಶಗಳನ್ನು ಅನುಸರಿಸಲು ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ),
ನಗರಾಭಿವೃದ್ಧಿ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH